**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :24 ಸಿಡಬ್ಲು :15

ಸಾಕ್ಷಿಯ ಹೆಸರು : ಶ್ರೀ.ಮಹಾದೇವ ಭೀಮಪ್ಪ ಗಸ್ತಿ
ತಂದೆಯ ಹೆಸರು : ಶ್ರೀ.ಭೀಮಪ್ಪ ಗಸ್ತಿ
ವಯಸ್ಸು : 65 ವರ್ಷ ಮೇಲ್ಪಟ್ಟು
ಉದ್ಯೋಗ : ಕೂಲಿ ಕೆಲಸ
ವಾಸ್ತವ್ಯ : ಮುಗಳಖೋಡ
ದಿನಾಂಕ : 18-10-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 14 ಪ್ರಾಸಾಃ 18 ರಾಜು ಸಂದ್ರಿಮನಿ ನನ್ನ ಮಗ. ಚಾಸಾಃ 1, ಚಾಸಾಃ 9, ಚಾಸಾಃ 10, ಚಾಸಾಃ 11, ಚಾಸಾಃ 13, ಚಾಸಾಃ 16 ಮತ್ತು ಚಾಸಾಃ 17, ಚಾಸಾಃ 18 , ಚಾಸಾಃ 26 ನನಗೆ ಗೊತ್ತಿರುತ್ತಾರೆ. ಚಾಸಾಃ 8 ಲಕ್ಷ್ಮಣ ಕೆಳಗಡೆ, ಚಾಸಾಃ 12 ಪ್ರಾಸಾಃ 10 ಅನೀಲ ಈರಗಾರ, ಚಾಸಾಃ 19, ಚಾಸಾಃ 20 ಮತ್ತು ಚಾಸಾಃ 21, ಚಾಸಾಃ 27, ಚಾಸಾಃ 28, ಚಾಸಾಃ 29, ಚಾಸಾಃ 30, ಚಾಸಾಃ 31 ನನಗೆ ಗೊತ್ತಿರುವುದಿಲ್ಲ.

2. ನಾನು ಹಿಂದೂ ಮಾದರ ಜಾತಿಗೆ ಸೇರಿದ್ದೇನೆ. ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ ಆರೋಪಿತರನ್ನು ನೋಡಿದ್ದೇನೆ, ಆದರೆ ಅವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಆರೋಪಿತರು ಯಾವ ಜಾತಿಯವರು ಎಂದು ನನಗೆ ಗೊತ್ತಿರುವುದಿಲ್ಲ.

3. ಯಲ್ಲಮ್ಮ ದೇವಿ ಪಾದುಕಟ್ಟೆ ಮುಂಭಾಗ ಇರುವ ಸ್ಥಳದ ಬಗ್ಗೆ ತಕರಾರು ಇತ್ತು. ಬಾಬನ್ನವರು ಮಾದರ ಸಮಾಜದವರೊಂದಿಗೆ ಜಾಗದ ವಿಚಾರವಾಗಿ ತಕರಾರು ಮಾಡುತ್ತಿದ್ದರು. ಆ ಜಾಗ ನಮ್ಮ ಸಮಾಜಕ್ಕೆ ಸೇರಬೇಕೆಂದು ನಾವು ಹೇಳುತ್ತೇವೆ, ಬಾಬನ್ನ ಅವರು ತಮಗೆ ಸೇರಬೇಕೆಂದು ಹೇಳುತ್ತಾರೆ.

4. 4-5 ವರ್ಷಗಳ ಹಿಂದೆ ಬಾಬನ್ನ ಅವರು ಜಾಗದಲ್ಲಿ ಕಬ್ಬಿಣದ ಸರಳುಗಳನ್ನು ನಿಲ್ಲಿಸಿ ಕಟ್ಟಡ ಕಟ್ಟಲು ಕಾಲಂ ಹಾಕುತ್ತಿದ್ದರು. ನಾವೆಲ್ಲರೂ ಪಂಚಾಯತಿ ಕಚೇರಿಗೆ ಹೋಗಿ ಹೇಳಿ ಬಂದಿದ್ದೇವು. ಸ್ಥಳದಲ್ಲಿ ಬಾಬನ್ನ ಅವರ ಜನರು ಕೈಯಲ್ಲಿ ಬಡಿಗೆ, ಕಲ್ಲನ್ನು ಹಿಡಿದುಕೊಂಡು ನಿಂತಿದ್ದರು. ಆರೋಪಿತರು ನೀವು ಬರಬೇಡಿ ಈ ಜಾಗ ನಮ್ಮದು ಎಂದು ಹೇಳಿದರು. ಕಡಕೋಳ ಎನ್ನುವವರು ಕಲ್ಲಿನ ಮೇಲೆ ನಿಂತಿದ್ದು ಜಾರಿ ಕೆಳಗೆ ಬಿದ್ದರು. ನಮ್ಮ ಜನರು ಆತನನ್ನು ಹಿಡಿಯಲು ಹೋದರು. ಬಾಬನ್ನ ಅವರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು, ಬಡಿಗೆ, ಕಲ್ಲುಗಳಿಂದ ಹೊಡೆಯಲು ಪ್ರಾರಂಭಿಸಿದರು. ನನಗೂ ಸಹ ಕಲ್ಲಿನಿಂದ ಸೊಂಟಕ್ಕೆ ಏಟು ಬಿದ್ದಿತ್ತು, ನನಗೆ ಯಾರು ಹೊಡೆದರು ಎಂದು ಈಗ ಅವರ ಹೆಸರು ನೆನಪಾಗುತ್ತಿಲ್ಲ.

5. ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿದಿರಿನ ಬಂಬುವನ್ನು ಸಾಕ್ಷಿ ನೋಡಿ ಗುರುತಿಸಿ ಅದರಿಂದ ನನ್ನ ಮಗನನ್ನು ಹೊಡೆದಿದ್ದಾರೆ ಎಂದು ಹೇಳಿದ್ದಾರೆ. ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದು ಅದರಿಂದ ಆರೋಪಿತರು ತಮಗೆ ಹೊಡೆದಿದ್ದು ಎಂದು ಹೇಳಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದೆ. ಬಸು ಎನ್ನುವವರು ದೂರನ್ನು ನೀಡಿದ್ದಾರೆ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜಿ.ಜಿ. ವಕೀಲರಿಂದ**

ಸ್ಥಳದಲ್ಲಿ ನಮ್ಮ ಸಮಾಜದವರು ಸುಮಾರು 20 ಜನ ಇದ್ದೇವು. ಬಾಬಣ್ಣ ಅವರ ಕಡೆಯವರು ಸುಮಾರು 50 ಜನರು ಇದ್ದರು. ನಾನು ರಸ್ತೆಯ ಮೇಲೆ ನಿಂತಿದ್ದೇನು. ವಿವಾದಿತ ಸ್ಥಳದಲ್ಲಿ ಕಲ್ಲಿನ ರಾಶಿ ಇದ್ದು, ಕಲ್ಲುಗಳು ಅಲ್ಲಲ್ಲಿ ಸಹ ಬಿದ್ದಿದ್ದವು ಮತ್ತು ಬಂಬುಗಳು ಸಹ ಬಿದ್ದಿದ್ದವು. ನಮ್ಮ ಸಮಾಜಕ್ಕೆ ಸೇರಿದ 16 ಜನರ ಮೇಲೆ ಕಲ್ಲುಗಳಿಂದ ಹೊಡೆದರು, ಬೈದರು ಎಂದು ಕೇಸ ಕೊಟ್ಟಿದ್ದು, ಆ ಪ್ರಕರಣದಲ್ಲಿ 16 ಜನರು ಹಾಜರಾಗುತ್ತಿರುವ ವಿಚಾರ ನನಗೆ ಗೊತ್ತಿಲ್ಲ.

2. ಮು.ಮಾ.3 ನ್ನು ತೋರಿಸಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ, ಆದರೆ ನಾನು ಹೇಳಿಕೆಯನ್ನು ಹೇಳಿದ್ದೇನೆ ಎಂದು ಹೇಳಿದ್ದಾರೆ. ಬಸಪ್ಪ ಎನ್ನುವವರು ನಮ್ಮ ಸಮಾಜದ ಮುಖ್ಯಸ್ಥರು ಎನ್ನುವುದು ಸರಿ. ಅವರಿಗೆ 4 ಜನ ಅಣ್ಣತಮ್ಮಂದಿರು ಇದ್ದಾರೆ ಎನ್ನುವುದು ಸರಿ. ಬಸಪ್ಪ ಮತ್ತು ಅವರ ಅಣ್ಣತಮ್ಮಂದಿರು ನಮ್ಮ ಸಮಾಜದವರಿಗೆ ಮನೆಗೆ ಒಬ್ಬರು ಬರಬೇಕೆಂದು ಆ ಜಾಗವನ್ನು ನಾವು ಉಳಿಸಿಕೊಂಡು ಗುಡಿ ಕಟ್ಟೋಣ ಎಂದು ನಮಗೆ ಹೇಳಿದ್ದರು ಎನ್ನುವುದು ಸರಿ.

3. ನಾನು ಇಂದು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿಕೆ ನೀಡುತ್ತಿದ್ದೇನೆ, ಈ ಹಿಂದೆ ಎಲ್ಲಿಯೂ ಹೇಳಿರುವುದಿಲ್ಲ. ಆರೋಪಿತರು ನನಗೆ ಹೊಡೆದಿರುವುದಿಲ್ಲ, ಆರೋಪಿತರು ಕಲ್ಲು, ಬಡಿಗೆ, ಕಬ್ಬಿಣ ಸರಳುಗಳಿಂದ ಯಾರಿಗೂ ಹಲ್ಲೆ ಮಾಡಿರುವುದಿಲ್ಲ, ಜಾತಿ ಹೆಸರು ಹಿಡಿದು ಬೈದಿರುವುದಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಹೊಡೆದಿದ್ದಾರೆ ಮತ್ತು ಬೈದಿದ್ದಾರೆ, ಜಾತಿ ಎತ್ತಿ ಬೈದಿದ್ದಾರೆ ಎಂದು ಹೇಳಿದ್ದಾರೆ.

4. ನಾನು, ನನ್ನ ಮಗ ಮತ್ತು ಬೇರೆ ಸಾಕ್ಷಿದಾರರು, ಚಾಸಾಃ 1 ಬಸಪ್ಪ ಎಲ್ಲರೂ ಒಟ್ಟಿಗೆ ನ್ಯಾಯಾಲಯಕ್ಕೆ ಬಂದಿದ್ದೇವೆ. ನಾನು ಬಸಪ್ಪ ಅವರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.